ಎಂಬ ಶಬ್ದಗಳಿಗೆ ನಾಚಿಕೊಂಡು 'ಮದುವೆ ಗಂಡುಗಳು ಏನ್ ಬಿಟ್ಟಿಯಾಗಿ ಸಿಗ್ತವಾ. ಅವುಕ್ಕೂ ಮಾರ್ಕೆಟ್‌ವ್ಯಾಲ್ಯೂ ಗಂಟೆ ಗಂಟೆಗೂ ಏರ್ತಿರ್ತದೆ ಅಲ್ವಾ?' ಎಂದು ಗೇಲಿ ಮಾಡಿ. 'ನಿಮ್ಮ ಮೆರೇಜ್ ವ್ಯಾಲ್ಯೂ ಎಷ್ಟು?' ಎಂದು ಕೊಂಕಿಸಿದಳು.

ರಾಜಿ ನಿಜವಾಗಿಯೂ ಡೇರ್ ಡೆವಿಲ್ ಎಂದುಕೊಂಡು 'ನನ್ನ ಮ್ಯಾರೇಜ್ ವ್ಯಾಲ್ಯೂ ಎಷ್ಟಪ್ಪಾ ಅಂದ್ರೇ... ಹೂಂ ಊಹೂಂ ಇಲ್ಲವೇ ಇಲ್ಲ. ನಮ್ಮ ಜಾತೀಲಿ ನಾವೇ ಹೆಣ್ಣಿಗೆ ಹನ್ನೆರಡು ರೂಪಾಯಿನ 'ತೆರ' ಕಟ್ಟಿ ಮದುವೆ ಆಗೋದು' ಎಂದು ಅವಳ ಮುಖ ನೋಡಿ ಕೆಂಪಗಾದ. ಸ್ವಲ್ಪ ಧೈರ್ಯ ಬಂದು ತನ್ನ ಮುಂದಿನ ಮಾತಿಗೆ ಹಿನ್ನೆಲೆಯಾಗಿ ಆರಂಭಿಸಿದ: 'ನೀವು ಮೊದಲು ಕ್ಯಾಂಪಸ್ಸಿನಲ್ಲಿ ನನ್ನನ್ನು ನೋಡಿ ಟೀಸ್ ಮಾಡ್ತಿದ್ದಾಗ ಯಾವೊಂದು ರೆಸ್ಪಾಂಡ್ ಮಾಡದೇನೂ ನನ್ನೊಳಗೆ ಎಷ್ಟೆಲ್ಲ ಸಂತೋಷಪಡುತ್ತಿದ್ದೆ ಗೊತ್ತಾ. ನಿಜವಾಗಿಯೂ ಆಗಲೇ ನಿಮ್ಮನ್ನು ಮಾತನಾಡಿಸಿಬಿಟ್ಟಿದ್ದಿದ್ದರೆ ಈ ವೇಳೆಗೆ ಏನೆಲ್ಲ ಆಗ್ತಿತ್ತೋ ಏನೋ' ಎಂದ. ಆಕೆ ನಿರುತ್ತರಳಾಗಿದ್ದಳು. 'ಹೌದಲ್ಲಾ, ನೀವು ಹೇಗೆ ನನ್ನನ್ನು ಅಷ್ಟೊಂದು ಟೀಸ್ ಮಾಡ್ತಿದ್ದದ್ದು. ನಿಮ್ಮ ಜೊತೆಗಿದ್ದ ಗೀತಾ, ಸುನಂದ ಅವರು ಇವರೆಲ್ಲ ಸೇರಿ ಒಂಟಿಯಾಗಿ ಸುತ್ತುವ ನನ್ನ ಮೇಲೆ ಏನೆಲ್ಲ ಕಿಚಾಯಿಸ್ತಿದ್ರೂ ಅಂತಾ ಈಗ ನೆನಸ್ಕೊಂಡ್ರೆ ಇದ್ದಕ್ಕಿದ್ದಂತೆ ಪರಿಚಯವಾದ ಮೇಲೆ ಈಗ ನಾವಿಬ್ಬರೂ ಒಂಥರ ತುಂಬ ಗೌರವಾನ್ವಿತ ಗೆಳೆಯರ ರೀತಿ ವರ್ತಿಸುತ್ತಿದ್ದೇವೆ ಅನ್ನಿಸ್ತೆ. ನಿಮ್ಮ ಗೆಳತಿ ಗೀತಾನಾ ಪರಿಚಯ ಮಾಡಿಕೊಟ್ಟಾಗ ಆಕೆ ಗೌಡರ ಹುಡುಗಿ ಎಂದು ಮೊದಲೇ ಗೊತ್ತಾಗಿದ್ದಿದ್ದರೆ ಖಂಡಿತ ನಾನು ಕಂಪ್ಯೂಟರ್ ಕ್ಲಾಸ್ ಬಗ್ಗೆ ಭಾಷಣ ಮಾಡುತ್ತಿರಲಿಲ್ಲ. ಆವತ್ತು ಆಕೆಗೆ ಒಂಥರ ನೋವಾಗಿದ್ದಕ್ಕೆ ನನಗೆ ಸಂಕಟ ಅನಿಸ್ತಿದೆ' ಎಂದು ಏನೊ ಹೇಳ ಹೊರಟ. ರಾಜಿಗೆ ಈಗಿನ ಯಾವೊಂದು ಮಾತು ಕಥೆಯೂ ಒಂದು ಸರಿಯಾದ ಹಂತಕ್ಕೆ ಬರುವಂತದಲ್ಲಾ ಎನಿಸಿ ಗಂಟಲು ಸರಿಪಡಿಸಿಕೊಂಡು 'ಇವತ್ತು ಇರಿ, ನಾನು ಒಂದು ನಿರ್ಧಾರಕ್ಕೆ ಬರಬೇಕಾಗಿದೆ' ಎಂದಿರಲ್ಲಾ ಅದೇನು ಹೇಳಿಬಿಡಿ. ರೂಂಗೆ ಹೋಗಿ ಎಲ್ಲ ಬಟ್ಟೆ ಪುಸ್ತಕ ಇತ್ಯಾದಿನೆಲ್ಲ ಪ್ಯಾಕ್ ಮಾಡಿ ನಾಳೆಗೆ ರೆಡಿಯಾಗಬೇಕಾಗಿದೆ ಎಂದಳು. ಇವನ ಕಿವಿ ಮತ್ತು ಕುತ್ತಿಗೆ ಒಂಥರ ಅಳುಕಿನಿಂದ ಬೆಚ್ಚಗಾದವು. ಗಂಟಲು ತಡವರಿಸಿತು. ನಾಲಿಗೆ ಒಣಗುತ್ತಿದೆಯೆನಿಸಿ 'ನನಗೆ ಇನ್ನೂ ಸ್ವಲ್ಪ ಟೈಂ ಕೊಡಿ ರಾಜಿ, ಇದ್ದಕ್ಕಿದ್ದಂತೆ ಹೇಗೆ ಹೇಳಲಿ?' ಎನ್ನುತ್ತಾ 'ಹೂಂ, ರಾಜೀ ನಿಮಗೆ, ನಿಮಗೇ... ಒಹ್! ಆಗ್ತಾ ಇಲ್ಲ, ನೀವೇ ಏನಾದ್ರೂ ಮಾತನಾಡಿ. ನಿಮ್ಮ ಮಾತು ಕೇಳ್ತಾ ಇದ್ರೆ ನನಗೆ ಒಂಥರ ಸುಖಾ ಅನಿಸ್ತದೆ. ಯಾರೋ ನನ್ನ ಒಳಗಿನವರು ಮಾತಾಡ್ತಾ ಇದ್ದಾರೆ ಅನ್ನಿಸ್ತೆ' ಎಂದು ಭಾವುಕನಾಗಿ ಅವಳ ಬೆರಳುಗಳ ಉಗುರಿನ ಮೇಲಿನ ಗುಲಾಬಿ ಬಣ್ಣವನ್ನು ನೋಡುತ್ತಾ ತನ್ನ ಕೈಬೆರಳುಗಳನ್ನು ಕಂಪಿಸುತ್ತಾ ತನಗೆ ಈ ಭೂಮಿಯ ಮೇಲೆ ಈ ಕ್ಷಣದಲ್ಲಿ ನಿಮ್ಮನ್ನು ಹೊರತುಪಡಿಸಿ ಯಾರೂ ಇಲ್ಲ ಎಂಬ ಭಾವದಲ್ಲಿ ತಣ್ಣಗೆ ಕರಗುವ ಮಂಜಿನಂತಾದ.

ರಾಜಿಗೆ ತಾನು ಏನು ಹೇಳುವುದೆಂದು ತೋಚದೆ. ಇದ್ದ ಎರಡು ವರ್ಷದಿಂದಲೂ ಇವನನ್ನು ತಾನು ಚುಡಾಯಿಸುತ್ತಾ ಬಂದರೂ ಈವರೆಗೆ ಏನೊಂದೂ ರೀತಿಯಲ್ಲಿ ಇಲ್ಲವೇ ಕೆಟ್ಟದಾಗಿಯಾದರೂ ತನ್ನನ್ನು ಬೈಯ್ಯದೆ ಮಾತನಾಡಿಸದೆ ನನ್ನ ದಿಟ್ಟಿಸಿಕೂಡ ನೋಡದೆ. ಈಗ, ಈ ಕೊನೆಯ ದಿನಗಳಲ್ಲಿ ಎಲ್ಲ ಮುಗಿಸಿ ಮನೆಗೆ ಹಿಂತಿರುಗುವಾಗ ಬಂದು ಮಾತನಾಡಿಸಿ ಹೀಗೆ ಮಗುವಿನ ಹಾಗೆ ನನ್ನೆದುರು ಕುಳಿತು ನನ್ನ ಮಾತನಾಡು ಎಂದು ದೀನನಾಗಿ ಕೇಳುತ್ತಾನಲ್ಲ ಏನಂತ ಹೇಳಲಿ. ನನ್ನ ಅಂತರಂಗದ ಯಾವ ಮಜಲನ್ನು ಬಿಚ್ಚಿಡಲಿ, ತನಗೆ ನಿನ್ನಂಥ ಮೆತ್ತನೆಯ ಹುಡುಗರು ಇಷ್ಟ ಅನ್ನಲೋ, ಇಷ್ಟ ಇಲ್ಲ ಅನ್ನಲೋ ಅಥವಾ ನೀನು ನನ್ನ ಮನೆಗೆ ಬಂದು ನಮ್ಮ ತಾಯಿಯ ಜೊತೆ ಮಾತನಾಡು. ನಮ್ಮ ಊರಿಗೆ ಬಂದು ನಾಲ್ಕಾರು ದಿನ ಇದ್ದು ಹೋಗು ಎನ್ನಲೊ... ಯಾವುದು ಹಿತದ ಮಾತು. ಯಾವುದು ವಿಷದ ಮಾತು. ಯಾವ ಮಾತಿನಿಂದ ಯಾವ ಸುಖ ಹುಟ್ಟುತ್ತದೆ. ನನ್ನ ಆಳದ ಅಳವಾದರೂ